ಉದಯವಾಣಿ
ಕನ್ನಡ ದಿನಪತ್ರಿಕೆ

ವಿದ್ಯಾರ್ಥಿಗಳಿಗೆ ಸಲಹೆ

# ಇತರರಿಗಿಂತ ಭಿನ್ನವಾಗಿ ಯೋಚಿಸಿ

## ■ ಹಾಗಾದಾಗ ಮಾತ್ರ ಹೊಸತನ್ನು ಸಾಧಿಸಲು ಸಾಧ್ಯ: ನಂದನ್ ನಿಲೇಕಣಿ

**ಬೆಂಗಳೂರು:** ಸಣ್ಣ ವಿಷಯವನ್ನೂ ವಿವಿಧ ದೃಷ್ಟಿಕೋನದಲ್ಲಿ ಆಲೋಚಿಸುವ ಪ್ರವೃತ್ತಿ ಬೆಳೆಸಿಕೊಂಡಾಗ ಮಾತ್ರ ಹೊಸತನ್ನು ಸಾಧಿಸಲು ಸಾಧ್ಯ ಎಂದು ಭಾರತೀಯ ವಿಶಿಷ್ಟ ಗುರುತಿನ ಚೀಟಿ ಪ್ರಾಧಿಕಾರ (ಯುಐಡಿಎಐ)ದ ಅಧ್ಯಕ್ಷ ನಂದನ್ ನಿಲೇಕಣಿ ವಿದ್ಯಾರ್ಥಿಗಳಿಗೆ ಸಲಹೆ ನೀಡಿದ್ದಾರೆ.

ನಗರ ಹೊರವಲಯದ ಕನಕಪುರ ರಸ್ತೆಯ ಜೈನ್ ವಿಶ್ವವಿದ್ಯಾಲಯದಲ್ಲಿ ಗುರುವಾರ ಆಯೋಜಿಸಲಾಗಿದ್ದ ವಿವಿಯ 3ನೇ ಘಟಿಕೋತ್ಸವದಲ್ಲಿ ವಿದ್ಯಾರ್ಥಿಗಳಿಗೆ ಪದವಿ ಪ್ರದಾನ ಮಾಡಿ ಅವರು ಮಾತನಾಡಿದರು.

ಯಾವುದೇ ವಿಷಯವಾಗಲಿ ಇತರರು ಯೋಚಿಸುವುದಕ್ಕಿಂತ ಭಿನ್ನವಾಗಿ ಯೋಚಿಸಿದಾಗ ಏನಾದರೊಂದು ಹೊಸತು ದೊರೆಯುತ್ತದೆ. ಎಲ್ಲರೂ ಯೋಚಿಸುವಂತೆ ನಾವೂ ಯೋಚಿಸುವುದರಿಂದ ಎಲ್ಲರೊಳಗೆ ನಾವೂ ಒಬ್ಬರಾಗುತ್ತೇವೆಯೇ ವಿನಾ, ವಿಭಿನ್ನ ಅಥವಾ ವಿಶಿಷ್ಟ ವ್ಯಕ್ತಿಯಾಗಲು ಸಾಧ್ಯವಾಗುವುದಿಲ್ಲ ಎಂದರು.

ಜೀವನದಲ್ಲಿ ಮೇಲೆ ಬರಬೇಕಾದರೆ ಕಠಿಣ ಪರಿಶ್ರಮ ಬೇಕು. ಹಾಗಾಗಿ ಶೈಕ್ಷಣಿಕ ಜೀವನದಷ್ಟೇ ಪ್ರಾಮುಖ್ಯತೆಯನ್ನು ವೃತ್ತಿಜೀವನಕ್ಕೂ ನೀಡಬೇಕು. ಇದು ವೃತ್ತಿಜೀವನದಲ್ಲಿ ಸಾಕಷ್ಟು ಅವಕಾಶಗಳಿವೆ. ಇನ್ನೊಬ್ಬರ ಕೈಕೆಳಗೆ ದುಡಿಯುವುದಕ್ಕಿಂತ ಸಾಧ್ಯವಾಗುವುದಾದರೆ ನಾಲ್ಕು ಜನರಿಗೆ ಕೆಲಸ ಕೊಡುವ ಪ್ರಯತ್ನ ನಡೆಸಿ ಎಂದು ವಿದ್ಯಾರ್ಥಿಗಳಿಗೆ ಕಿವಿಮಾತು ಹೇಳಿದರು.



ಜೈನ್ ವಿಶ್ವವಿದ್ಯಾಲಯದಲ್ಲಿ ಗುರುವಾರ ಆಯೋಜಿಸಲಾಗಿದ್ದ ವಿವಿಯ 3ನೇ ಘಟಿಕೋತ್ಸವದಲ್ಲಿ ವಿದ್ಯಾರ್ಥಿಗಳಿಗೆ ನಂದನ್ ನಿಲೇಕಣಿ ಪದವಿ ಪ್ರದಾನ ಮಾಡಿದರು. ಡಾ. ಸಿ.ಜಿ. ಕೃಷ್ಣದಾಸ್ ನಾಯರ್, ಡಾ.ಚೆನ್‌ರಾಜ್ ರಾಯ್ಚಂದ್, ಇತರರು ಇದ್ದರು.

ವೃತ್ತಿಜೀವನದ ಯಶಸ್ಸಿಗೆ ಸಾಂಘಿಕ ಕಾರ್ಯ ಅತ್ಯಂತ ಮುಖ್ಯ. ಈ ವಿಚಾರದಲ್ಲಿ ಏಕಾಂಗಿ ಹೋರಾಟಕ್ಕಿಂತ ಜೊತೆಯಲ್ಲಿರುವವರು ಕೈಜೋಡಿಸಿದಾಗ ಮುಟ್ಟಬೇಕಾದ ಗುರಿ ಹತ್ತಿರುವಾಗುತ್ತದೆ ಎಂದರು.

ಘಟಿಕೋತ್ಸವದಲ್ಲಿ ವಿವಿಯ ವಿದ್ಯಾರ್ಥಿಗಳಾದ ಎಚ್.ಎನ್. ಪ್ರಕೃತಿ, ಬಿಂದು ಶ್ರೀನಿವಾಸ್, ಎಸ್.ಕೆ. ಮೈತ್ರಿ ಮತ್ತು ರೇಖಾ ಅವರು ಮಂಡಿಸಿದ ವಿವಿಧ ಪ್ರೌಢ ಪ್ರಬಂಧಗಳಿಗೆ ಪಿಎಚ್‌ಡಿ ಪದವಿ ನೀಡಿ ಗೌರವಿಸಲಾಯಿತು.

> ಚಿಕ್ಕಂದಿನಿಂದಲೂ ಪೈಲಟ್ ಆಗಬೇಕೆಂಬುದು ನನ್ನ ಕನಸಾಗಿತ್ತು. ಇದರಿಂದ ವೈಮಾನಿಕ ಕ್ಷೇತ್ರದಲ್ಲಿ ಎಂಟೆಕ್ ಮುಗಿಸಿದ್ದೇನೆ. ಇನ್ನೂ ಎಲ್ಲಿಯೂ ಕೆಲಸ ದೊರೆತಿಲ್ಲ. ಈಗಾಗಲೇ ಇಸ್ರೋ, ಡಿಆರ್‌ಡಿಓ ಮತ್ತಿತರೆಡೆ ವೃತ್ತಿಗಾಗಿ ಅರ್ಜಿ ಸಲ್ಲಿಸಿದ್ದೇನೆ. ಮೈಕ್ರೋ ಏರಿಯಲ್ ವೆಹಿಕಲ್ (ಅತಿ ಸೂಕ್ಷ್ಮ ವಿಮಾನ) ಸಂಶೋಧನೆ ನನ್ನ ಜೀವನದ ಗುರಿ.
>
> ● **ಶ್ರೀನಿಧಿ,** ಎರಡು ಚಿನ್ನದ ಪದಕ ಪಡೆದ ಎಂಟೆಕ್ ಪದವೀಧರ

ಪದವಿ ಹಾಗೂ ಸ್ನಾತಕೋತ್ತರ ಪದವಿಯಲ್ಲಿ ಪ್ರಥಮ ದರ್ಜೆ ಹಾಗೂ ಚಿನ್ನದ ಪದಕ ಪಡೆದ ನೂರಾರು ವಿದ್ಯಾರ್ಥಿಗಳೂ ಸೇರಿದಂತೆ ಘಟಿಕೋತ್ಸವದಲ್ಲಿ ಒಟ್ಟು 2281 ಮಂದಿಗೆ ಪದವಿ ಪ್ರದಾನ ಮಾಡಲಾಯಿತು.

ಕಾರ್ಯಕ್ರಮದಲ್ಲಿ ವಿವಿಯ ಕುಲಾಧಿಪತಿ ಡಾ.ಸಿ.ಜಿ. ಕೃಷ್ಣದಾಸ್ ನಾಯರ್, ಅಧ್ಯಕ್ಷ ಡಾ.ಚೆನ್‌ರಾಜ್ ರಾಯ್ಚಂದ್, ಕುಲಪತಿ ಡಾ.ಎನ್. ಸುಂದರ್‌ರಾಜನ್, ಕುಲಸಚಿವ ಡಾ. ಕೃಷ್ಣನ್ ಮತ್ತಿತರರು ಇದ್ದರು.